ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ದಿನಾಂಕ: 25-09-2024

ಸಂಖ್ಯೆ: ಎಸಿ7/27/2024-25

## ಅಂತಿಮ ಅಧಿಸೂಚನೆ

ವಿಷಯ: ಸ್ನಾತಕೋತ್ತರ ಕೋರ್ಸ್‌ಗಳಿಗೆ ಭರ್ತಿಯಾಗದೆ ಖಾಲಿ ಉಳಿದ ಸೀಟುಗಳ ಪ್ರವೇಶಾತಿ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಸಮ ಸಂಖ್ಯೆಗಳ ಅಧಿಸೂಚನೆ ದಿನಾಂಕ: 31-08-2024.
2. ವಿಶ್ವವಿದ್ಯಾನಿಲಯದ ಅಧ್ಯಯನ ವಿಭಾಗಗಳ/ಸಂಯೋಜಿತ ಕಾಲೇಜುಗಳ ಅಧ್ಯಕ್ಷರು/ಪ್ರಾಂಶುಪಾಲರುಗಳ ಮನವಿ.
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 24-09-202

********

ಉಲ್ಲೇಖಿತ(2)ರ ಮನವಿ ಮೇರೆಗೆ, ಉಲ್ಲೇಖಿತ(1)ರ ಅಧಿಸೂಚನೆಯಲ್ಲಿನ ವೇಳಾಪಟ್ಟಿಯಂತೆ ಪ್ರವೇಶಾತಿ ಪ್ರಕ್ರಿಯೆ ನಡೆದ ನಂತರ ಸೀಟುಗಳು ಭರ್ತಿಯಾಗದೆ ಉಳಿದಿದ್ದಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

1. Admission portalನಲ್ಲಿ Register ಆಗಿ ಶುಲ್ಕ ಪಾವತಿಸಿ ಪ್ರವೇಶ ಪರೀಕ್ಷೆ ಬರೆದು/ಬರೆಯದೇ ಪ್ರವೇಶಾತಿಗೆ ಅರ್ಜಿ ಸಲ್ಲಿಸದೇ ಇರುವಂತಹ ವಿದ್ಯಾರ್ಥಿಗಳಿಂದ ಅರ್ಜಿ ಶುಲ್ಕ ರೂ.500/-ಗಳನ್ನು ವಿಶ್ವವಿದ್ಯಾನಿಲಯದ GRA ಖಾತೆಗೆ ಚಲನ್ ಮೂಲಕ ಪಾವತಿಸಿ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ದಿನಾಂಕ: 03-10-2024ರೊಳಗೆ ಸಂಬಂಧಿಸಿದ ಅಧ್ಯಯನ ವಿಭಾಗಕ್ಕೆ ಸಲ್ಲಿಸುವುದು.
2. Admission portalನಲ್ಲಿ Register ಆಗದೇ ಇರುವ ವಿದ್ಯಾರ್ಥಿಗಳು ರೂ.1,500/-ಗಳನ್ನು ವಿಶ್ವವಿದ್ಯಾನಿಲಯದ GRA ಖಾತೆಗೆ ಚಲನ್ ಮೂಲಕ ಪಾವತಿಸಿ ಚಲನ್‌ನೊಂದಿಗೆ ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ದಿನಾಂಕ: 03-10-2024ರೊಳಗೆ ಸಂಬಂಧಿಸಿದ ಅಧ್ಯಯನ ವಿಭಾಗಕ್ಕೆ ಸಲ್ಲಿಸುವುದು.
3. **ಅಧ್ಯಯನ ವಿಭಾಗಗಳ ಪ್ರವೇಶಾತಿ ಸಮಿತಿ ಅಧ್ಯಕ್ಷರು ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ ಪ್ರವೇಶಾತಿ ನೀಡುವುದು.**
   i. **Scheme-'A' ಸೀಟುಗಳು ಖಾಲಿ ಉಳಿದು, Scheme-'B' ಸೀಟುಗಳನ್ನು operate ಮಾಡದಿದ್ದಲ್ಲಿ, Scheme-'A' ಸೀಟುಗಳು ಭರ್ತಿಯಾಗದಿದ್ದಲ್ಲಿ Scheme-'A' ನಲ್ಲಿಯೇ ಭರ್ತಿ ಮಾಡಿ, ನಂತರ Scheme-'B' ಸೀಟುಗಳನ್ನು operate ಮಾಡುವುದು.**
   ii. **Scheme-'B' ಸೀಟುಗಳು operate ಆಗಿ, ಒಂದು ವೇಳೆ Scheme-'A' ಸೀಟುಗಳು ಖಾಲಿ ಉಳಿದಿದ್ದಲ್ಲಿ, ಅವುಗಳನ್ನು Scheme-'B'ಗೆ shift ಮಾಡಿ, Scheme-'B' ಅಡಿಯಲ್ಲಿಯೇ ಪ್ರವೇಶಾತಿ ನೀಡುವುದು.**
   iii. **ಮೇಲಿನಂತೆ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ (verification), Casual round ಮಾದರಿಯಲ್ಲಿ ದಿನಾಂಕ 05-10-2024ರ ಒಳಗೆ ಎಲ್ಲ ಪ್ರವೇಶಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು.**
   iv. **ಮೇಲೆ ತಿಳಿಸಿರುವ ದಿನಾಂಕದೊಳಗೆ ಸರ್ಕಾರಿ/ಖಾಸಗಿ/ಸಂಯೋಜಿತ/ಸ್ವಾಯತ್ತ ಕಾಲೇಜುಗಳಲ್ಲಿ ಉಳಿದ ಸೀಟುಗಳ ಎದುರಿಗೆ ನಿಯಮಾನುಸಾರ ಆಯಾ ಅಧ್ಯಯನ ವಿಭಾಗದ ಅಧ್ಯಕ್ಷರುಗಳು ಪ್ರವೇಶಾತಿ ನೀಡುವುದು.**
4. ಮೇಲ್ಕಂಡಂತೆ ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣವಾದ ನಂತರ ಪ್ರವೇಶಾತಿಯು ನಿಗದಿತ ಸಂಖ್ಯಾಮಿತಿಯ ಒಳಗಿದ್ದಲ್ಲಿ ಅಥವಾ 10ಕ್ಕಿಂತ ಜಾಸ್ತಿಯಿದ್ದಲ್ಲಿ ತರಗತಿಗಳನ್ನು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಕ್ಯಾಲೆಂಡರ್ ಅನುಸಾರ ಆರಂಭಿಸುವಂತೆ ತಿಳಿಸಲಾಗಿದೆ. ಮುಂದುವರೆದು, ಪ್ರವೇಶಾತಿ ಸಂಖ್ಯಾಮಿತಿ ಹತ್ತಕ್ಕಿಂತ(10) ಕಡಿಮೆ ಇದ್ದಲ್ಲಿ ವಿದ್ಯಾರ್ಥಿಗಳ ಮನವೊಲಿಸಿ ಇತರೆ ಸಮಾನಾಂತರ ಪ್ರೊಗ್ರಾಂಗಳಿಗೆ ಅಥವಾ ಅರ್ಹತೆಯಿರುವ ಪ್ರೊಗ್ರಾಂಗಳಿಗೆ ಪ್ರವೇಶಾತಿಗಳನ್ನು Shift ಮಾಡುವುದು. ನಂತರ, ಈ ವಿಷಯವನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ತಂದು ಅನುಮತಿ ಪಡೆಯುವುದು.
5. ಅರ್ಹ ಅಭ್ಯರ್ಥಿಗಳು ಪ್ರವೇಶಾತಿ ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ https://www.uompgadmissions.com ಮೂಲಕ Download ಮಾಡಿದ ಅರ್ಜಿಯನ್ನು ಭರ್ತಿ ಮಾಡಿ ಸಂಬಂಧಿಸಿದ ಅಧ್ಯಯನ ವಿಭಾಗಕ್ಕೆ ಸಲ್ಲಿಸುವುದು.

ಕುಲಸಚಿವರಿಂದ ಕರಡು ಅನುಮೋದಿಸಿದೆ.

**ಉಪ ಕುಲಸಚಿವ(ಶೈಕ್ಷಣಿಕ)**

ಇವರಿಗೆ;
1. ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳು/ನಿರ್ದೇಶಕರುಗಳು/ಸಂಯೋಜನಾಧಿಕಾರಿಗಳು/ಮುಖ್ಯಸ್ಥರು, ಮಾನಸಗಂಗೋತ್ರಿ, ಮೈಸೂರು.
2. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.



Scanned with ACE Scanner